# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,

# ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆಃ** 5019/2022 ಪ್ರಾಸಾ-3

ಚಾಸಾ-2

ದಿನಾಂಕಃ 03-01-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ರೇಣುಕಾಚಾರಿ |
| **ತಂದೆಯ ಹೆಸರು** | ನೀಲಕಂಠಾ ಚಾರಿ |
| **ವಯಸ್ಸು** | 31 ವರ್ಷ |
| **ಉದ್ಯೋಗ** | ಅರ್ಚಕರು |
| **ವಾಸಸ್ಥಳ** | ಆನೇಕಲ್ಲು |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ಚಾಸಾ-1 ನನ್ನ ಹೆಂಡತಿ. ಮೃತೆ ಸುಮಿತ್ರ ನನ್ನ ಅತ್ತೆ. 1 ನೇ ಆರೋಪಿ ಪುನೀತ್ ನನ್ನ ಅತ್ತೆಯ ತಂಗಿಯ ಮಗ. 2 ನೇ ಆರೋಪಿ ಶೈಲಜಾ ನನ್ನ ಹೆಂಡತಿಯ ತಂಗಿ.

ನನ್ನ ಮದುವೆ ಚಾಸಾ-1 ಜೊತೆ ದಿನಾಂಕಃ 23/08/2020 ರಂದು ದೇವರಾಯನ ದುರ್ಗ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ನಡೆಯಿತು. ಮದುವೆ ಬಳಿಕ ನಾನು ಮತ್ತು ಚಾಸಾ-1 ನಮ್ಮ ಊರು ಆನೇಕಲ್ಲಿನಲ್ಲಿ ವಾಸ ಇದ್ದೇವು. ನನ್ನ ಅತ್ತೆ ಮತ್ತು 2 ನೇ ಆರೋಪಿ ಶೈಲಜಾ ನಮ್ಮ ಅತ್ತೆ ಮನೆ ಕೊರಟಗೆರೆಯ ಸಜ್ಜನರ ಬೀದಿಯಲ್ಲಿ ವಾಸ ಇದ್ದರು. ನನ್ನ ಮಾವ ಅಂದರೆ ನನ್ನ ಹೆಂಡತಿಯ ತಂದೆ ನಮ್ಮ ಮದುವೆಯ ಮುಂಚೆ ತೀರಿಕೊಂಡಿದ್ದರು. ಮದುವೆಯ ಬಳಿಕ ನಾನು ಮತ್ತು ಚಾಸಾ-1 ನಮ್ಮ ಅತ್ತೆ ಮನೆಗೆ ಆಗಾಗ ಬಂದು ಹೋಗುತ್ತಿದ್ದೆವು.

ದಿನಾಂಕಃ 18/12/2021 ಕ್ಕೆ ನನ್ನ ಹೆಂಡತಿಯ ಹುಟ್ಟುಹಬ್ಬ ಇತ್ತು. ಅದಕ್ಕೆ ನನ್ನ ಅತ್ತೆ ಪುನೀತ್, ಶೈಲಜಾ ನಮ್ಮ ಮನೆ ಆನೇಕಲ್ಲಿಗೆ ಬಂದಿದ್ದರು. ಮೂರೂ ಜನ ಕೂಡಾ ನಮ್ಮ ಮನೆಯಲ್ಲಿ 3 ದಿವಸ ಇದ್ದು ಹೋದರು. ದಿನಾಂಕ 31/01/2022 ರಂದು ಬೆಳಿಗ್ಗಿನ ಜಾವ 3-30 ರಿಂದ 4-00 ಗಂಟೆಯ ಮಧ್ಯೆ ಪುನೀತ್ ನನಗೆ ಪೋನ್ ಮಾಡಿ ನನ್ನ ಅತ್ತೆ ನೀರಿನ ಸಂಪಿಗೆ ಬಿದ್ದು ತೀರಿಕೊಂಡಿದ್ದಾರೆಂದು ಹೇಳಿದ. ಆಗ ನಾನು ಬದುಕಿರಬಹುದು, ಅವರನ್ನು ಸಂಪಿನಿಂದ ಮೇಲೆ ಎತ್ತಿ ನೋಡು ಎಂದು ಹೇಳಿದೆ. ಅವನು ಇಲ್ಲಾ ತೀರಿಕೊಂಡಿದ್ದಾರೆಂದು ಹೇಳಿದ. ಬಳಿಕ ನಾನು, ನನ್ನ ಹೆಂಡತಿ, ನಮ್ಮ ಅಪ್ಪ – ಅಮ್ಮ ಹೊರಟು ಬೆಳಿಗ್ಗೆ 10-00 ಗಂಟೆಗೆ ಕೊರಟಗೆರೆಯ ಅತ್ತೆ ಮನೆಗೆ ಬಂದೆವು. ನಾವು ಬರುವಷ್ಟರಲ್ಲಿ ಅತ್ತೆಯ ಶವವನ್ನು ಮನೆಯ ಹಾಲ್ ನಲ್ಲಿ ಮಲಗಿಸಿ, ಹೂವಿನ ಹಾರ ಹಾಕಿ, ಗಂಧದ ಕಡ್ಡಿ ಹಚ್ಚಿಟ್ಟಿದ್ದರು. ಅತ್ತೆಯ ಮುಖದ ಮೇಲೆ ಮಾರ್ಕ ಮತ್ತು ಕುತ್ತಿಗೆಯಲ್ಲಿ ಕೂಡಾ ಮಾರ್ಕ ಇತ್ತು. ಸಂಪಿಗೆ ಬಿದ್ದ ಕಾರಣ ಗಾಯ ಆಗಿರಬಹುದು ಎಂದು ಭಾವಿಸಿದೆ. ಬಳಿಕ ಮೃತ ದೇಹವನ್ನು ಕೊರಟಗೆರೆಯ ಮಲ್ಲೇಶ್ವರ ರಸ್ತೆಯ ರುದ್ರ ಭೂಮಿಯಲ್ಲಿ ನಮ್ಮ ಸಂಬಂಧಿಕರ ಸಮುಖದಲ್ಲಿ ಮಣ್ಣು ಮಾಡಿದೆವು. 10/01/2022 ರಂದು ಅತ್ತೆಯ ಕಾರ್ಯ ಮಾಡಿದೆವು. ನಾವು ಅತ್ತೆಯ ಕಾರ್ಯ ಮುಗಿದ ಬಳಿಕ 2 ನೇ ಆರೋಪಿಯನ್ನು ನಮ್ಮ ಮನೆಗೆ ಕರೆದುಕೊಂಡು ಹೋಗಲು ತಿರ್ಮಾನಿಸಿದಾಗ 1 ನೇ ಆರೋಪಿ ಪುನೀತ್ ಗಲಾಟೆ ಮಾಡಿ ನಾನು, ನನ್ನ ಮನೆಗೆ ಕರೆದುಕೊಂಡು ಹೋಗುತ್ತೇನೆಂದು ಹೇಳಿದ. ಆಗ ನನ್ನ ಅತ್ತೆ, ಅತ್ತೆಯ ವೈದ, ನನ್ನ ಹೆಂಡತಿ ಎಲ್ಲರೂ ಆರೋಪಿಗಳ ಪರಸ್ಪರ ಅಣ್ಣ ತಂಗಿ ಆಗುತ್ತಾರೆ, ಆದ ಕಾರಣ ನಮ್ಮ ಮನೆಗೆ ಅಥವಾ ಆಕೆಯ ದೊಡ್ಡಪ್ಪನ ಮನೆಗೆ ಹೋಗಲಿ ಎಂದು ಹೇಳಿದರು. ಆಗ ದೊಡ್ಡಪ್ಪ ನಮ್ಮ ಮನೆಗೆ ಕರೆದುಕೊಂಡು ಹೋಗಿ ಎಂದು ನನ್ನ ಹೆಂಡತಿಗೆ ಹೇಳಿದ. ಹಾಗಾಗಿ 10/01/2022 ರಂದು ಸಂಜೆ ಬಳಿಕ ನಾವು 2 ನೇ ಆರೋಪಿಯನ್ನು ನಮ್ಮ ಊರಿಗೆ ಕರೆದುಕೊಂಡು ಹೋದೆವು. ನಮ್ಮ ಮನೆಯಲ್ಲಿ ಇದ್ದಾಗ 2 ನೇ ಆರೋಪಿ ನನ್ನ ಹೆಂಡತಿ ಬಳಿ ನನಗೆ ಬೆಜಾರು ಆಗುತ್ತಿದೆ, ನಿನ್ನಲ್ಲಿ ಏನೋ ಹೇಳಬೇಕು ಎಂದು ಹೇಳುತ್ತಿದ್ದಳು. ಅವಳು ನನ್ನ ಹೆಂಡತಿಯ ಬಳಿ ನಾನು ಮತ್ತು ಪುನೀತ್

ಪರಸ್ಪರ ಪ್ರೀತಿಸುತ್ತಿದ್ದೇವೆ ಆದರೆ ನಮ್ಮ ತಾಯಿ ನಾವಿಬ್ಬರೂ ವರಸೆಯಲ್ಲಿ ಅಣ್ಣ ತಂಗಿ ಆದ ಕಾರಣ ಅದಕ್ಕೆ ವಿರೋಧಿಸಿದ್ದರು, ಹಾಗಾಗಿ ನಾವಿಬ್ಬರೂ ಸೇರಿ ದಿನಾಂಕಃ 30/01/2022 ರಂದು ರಾತ್ರಿ 12-00 ಗಂಟೆಗೆ ನನ್ನ ಅತ್ತೆ ಹಾಲ್ ನಲ್ಲಿ ಮಲಗಿದ್ದಾಗ 2 ನೇ ಆರೋಪಿ ಅವರ ಕಾಲು ಮತ್ತು ಕೈ ಗಟ್ಟಿಯಾಗಿ ಹಿಡಿದುಕೊಂಡಾಗ, 1 ನೇ ಆರೋಪಿ ನನ್ನ ಅತ್ತೆಯ ಬಾಯಿಯನ್ನು ಮುಚ್ಚಿ ಕುತ್ತಿಗೆಯನ್ನು ಹಿಸುಕಿ ಸಾಯಿಸಿದ್ದೆವೆ ಎಂದು ಹೇಳಿದಳು. ಬಳಿಕ ಪ್ರಾಣ ಹೋದ ಮೇಲೆ ಅತ್ತೆಯ ಶವವನ್ನು ಇಬ್ಬರೂ ತೆಗೆದುಕೊಂಡು ಹೋಗಿ ನೀರಿನ ಸಂಪಿನ ಒಳಗೆ ಹಾಕಿದೆವು ಎಂದು ಹೇಳಿದಳು. ಆಗ ನಾವು ಈ ವಿಚಾರವನ್ನು ನನ್ನ ಹೆಂಡತಿಯ ದೊಡ್ಡಪ್ಪ ಮತ್ತು ಮಾವಂದಿರಗೆ ಹೇಳಿದೆವು. ಬಳಿಕ ಅವಳು ದೊಡ್ಡಪ್ಪನ ಮನೆಗೆ ಹೋದಳು. ಆಗ ನನ್ನ ಹೆಂಡತಿ ಕೊರಟಗೆರೆ ಠಾಣೆಗೆ ಹೋಗಿ ಆರೋಪಿಗಳ ಮೇಲೆ ದೂರು ನೀಡಿದಳು. ಬಳಿಕ ಪೋಲೀಸರು ಆರೋಪಿಗಳನ್ನು ವಶಕ್ಕೆ ತೆಗೆದುಕೊಂಡರು. ನಾನು ಠಾಣೆಗೆ ಹೋಗಿದ್ದಾಗ ಸಂಜೆ ಪೋಲೀಸರು ಶೈಲಜಾ ಮೊಬೈಲನ್ನು ತೋರಿಸಿದರು ಅದರಲ್ಲಿ ಶೈಲಜಾ ಪುನೀತ್ ಗೆ ಮೆಸೆಜ್ ಮಾಡಿದ್ದು ಇತ್ತು. ಆ ಮೆಸೆಜ್ ನಲ್ಲಿ ಆಕೆ ಅಮ್ಮನನ್ನು ಕೊಲೆ ಮಾಡಲು ನಾನು ಕೈ ಜೊಡಿಸುತ್ತೇನೆ ಬಾ ಎಂದು ಇತ್ತು.

ದಿನಾಂಕಃ 16/02/2022 ರಂದು ನನ್ನ ಅತ್ತೆಯನ್ನು ಮಣ್ಣು ಮಾಡಿದ ಜಾಗಕ್ಕೆ ಪೋಲೀಸರು ಬಂದಿದ್ದರು. ಆರೋಪಿಗಳು ಇಬ್ಬರೂ ಕೂಡಾ ಬಂದಿದ್ದರು. ಅವರು ಅತ್ತೆಯನ್ನು ಮಣ್ಣು ಮಾಡಿದ ಜಾಗವನ್ನು ತೋರಿಸಿದರು. ಅಲ್ಲಿ ಪೋಲೀಸರು ಮಹಜರ್ ಮಾಡಿದರು. ಅದಕ್ಕೆ ನಾನು ಸಹಿ ಮಾಡಿದ್ದೆನೆ. ಸದರಿ ಮಹಜರ್ ನ್ನು ಬೆಳಿಗ್ಗೆ 12-00 ನಂತರ ಮಾಡಿದ್ದಾರೆ ಸಾಕ್ಷಿ ನಿಪಿ-2 ರಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಮೊಬೈಲ್ ನ್ನು ಗುರುತಿಸುವ ಸಲುವಾಗಿ ಮತ್ತು ಅದು ಠಾಣೆಯಿಂದ ನ್ಯಾಯಾಲಯಕ್ಕೆ ಹಾಜರುಪಡಿಸದೆ ಇದ್ದ ಕಾರಣ ಅದನ್ನು ಗುರುತಿಸುವ ಸಲುವಾಗಿ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು)**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ತುಮಕೂರು-ಮಧುಗಿರಿ.**